# ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

**ಸತ್ರ ಪ್ರಕರಣ ಸಂಖ್ಯೆಃ 5072/2025 ಮತ್ತು**
**ಸತ್ರ ಪ್ರಕರಣ ಸಂಖ್ಯೆಃ 5077/2025**

ಪ್ರಾ ಸಾ 1 ಚಾ ಸಾ 1

ಹೆಸರುಃ ವಿನೋದ್‌ಗೌಡ

ತಂದೆಯ ಹೆಸರುಃ ಶ್ರೀ ಶಿವಮಲ್ಲು

ವಯಸ್ಸುಃ 42 ವರ್ಷ

ಉದ್ಯೋಗಃ ವಲಯ ಅರಣ್ಯಾಧಿಕಾರಿಗಳು

ವಾಸಃ ಮೈಸೂರು .

**ದಿಃ 24.07.2026** ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯ್ತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

1. 2024-2025 ರವರೇಗೆ ನಾನು ಶ್ರೀರಂಗಪಟ್ಟಣದ ಅರಣ್ಯ ವಲಯದ ವಲಯಾರಣ್ಯಾದಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ .

2. ದಿಃ 9.6.2025 ರಂದು ಮದಾ್ಯಹ್ನ 2 ಗಂಟೆಯ

ಸಮಯದಲ್ಲಿ ನಮ್ಮ ಸಿಬ್ಬಂದಿಗಳು ದೂರವಾಣಿ ಮೂಲಕ ಕರಿಗಟ್ಟ ಅರಣ್ಯ ಪ್ರದೇಶಕ್ಕೆ ಯಾರೋ ಅಕ್ರಮ ಪ್ರವೇಶ ಮಾಡಿ ಮರ ಕಡಿಯುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿ ನೀಡಿದ್ದರು. ತಕ್ಷಣ ನಾನು ಮತ್ತು ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ಮದ್ಯಾಹ್ನ 2.30 ಗಂಟೆಯ ಸಮಯದಲ್ಲಿ ಹೋಗಿರುತ್ತೇವೆ .

3.ಘಟನ ಸ್ಥಳದಲ್ಲಿ ನಾವು ತಂಡಗಳಾಗಿ ರಚನೆ ಮಾಡಿಕೊಂಡು ಆಸಾಮಿಗಳನ್ನು ಹುಡುಕುವುದಕ್ಕೆ ಪ್ರಯತ್ನ ಪಟ್ಟೆವು . ಆ ಸಮಯದಲ್ಲಿ ಕರಿಗಟ್ಟ ಅರಣ್ಯ ಪ್ರದೇಶದ ದೇವರಕಾಡು ಅರಣ್ಯ ಪ್ರದೇಶದ ಏತ ನೀರಾವರಿ ಚಾನಲ್ ಬಳಿ ಇಬ್ಬರು ಆಸಾಮಿಗಳು ಕುಳಿತು ಮರವನ್ನು ಚೆಕ್ಕೆಗಳಾಗಿ ಕೆತ್ತುತ್ತುರುವುದು ಕಂಡುಬಂತು . ಆ ಸಮಯದಲ್ಲಿ ನಾವು ಅವರಿಬ್ಬರವನ್ನು ಸುತ್ತುವರಿದು ಹಿಡಿಯಲು ಪ್ರಯತ್ನಪಟ್ಟೆವು . ಆಗ ಇಬ್ಬರೂ ಕಾಡಿನ ಒಳಗೆ ಓಡಿ ಹೋದರು . ಒಬ್ಬನನ್ನು ಬೆನ್ನಟ್ಟಿ ದಾಗ ಆತ ನಮ್ಮ ಕೈಗೆ ಸಿಕ್ಕಿದ . ಇನ್ನೊಬ್ಬ ಕಾಡಿನಲ್ಲಿ ತಲೆಮರೆಸಿಕೊಂಡ .

4. ನಂತರ ಸಿಕ್ಕ ಆಸಾಮಿಯನ್ನು ಕರೆದುಕೊಂಡು ಅವರು

ಕುಳಿತಿದ್ದ ಜಾಗಕ್ಕೆ ಕರೆದುಕೊಂಡು ಬಂದೆವು . ಅಲ್ಲಿ ಒಂದು ಬಟ್ಟೆ ಯಲ್ಲಿ 29- ಶ್ರೀಗಂದದ ಚಕ್ಕೆಗಳು , 2- ಶ್ರೀಗಂದದ ಮರದ ಬುಡಗಳು (ಬೇರು ಸಮೇತ ಇದ್ದವು) ಹಾಗೂ ಒಂದು ಕತ್ತಿ ಮತ್ತು ಒಂದು ಕಬ್ಬಿಣದ ಆರೆ ಇತ್ತು . ಈ ಬಗ್ಗೆ ಸೆರೆಸಿಕ್ಕ ಆಸಾಮಿಯನ್ನು ವಿಚಾರಿಸಿದಾಗ ತಾನು ವೆಂಕಟೇಶ , ಕೃಷ್ಣಗಿರಿ ಜಿಲ್ಲೆ , ತಮಿಳುನಾಡಿನವನು ಎಂದು ತಿಳಿಸಿದ . ಕಳೆದ ಸುಮಾರು 5-6 ವರುಷಗಳಿಂದ ಕರಿಗಟ್ಟ ಬಳಿಯ ತಮ್ಮ ಸಂಬಂದಿಕರ ಮನೆಯಲ್ಲಿ ವಾಸ ಇದ್ದು ಅಕ್ಕ ಪಕ್ಕದ ಜಮೀನುಗಳಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ಎಂದು ತಿಳಿದುಬಂತು .

5. ಈ ದಿನ ಬೆಳಗ್ಗೆ 11 ಗಂಟೆಯ ಸಮಯದಲ್ಲಿ ನನ್ನ ಸಂಬಂದಿಯಾದ ಗೋವಿಂದ ಅವರು ಕರಿಗಟ್ಟ ಅರಣ್ಯ ಪ್ರದೇಶದಲಿ ್ಲಶ್ರೀಗಂದದ ಮರಗಳು ಇವೆ , ಅವುಗಳನ್ನು ಕಡಿದು ಮಾರಿದರೆ ನಮಗೆ ಹಣ ಸಿಗುತ್ತದೆ ಎಂದು ನನಗೆ ಆತ ತಿಳಿಸಿದನು ಎಂದು ಸೆರೆ ಸಿಕ್ಕ ಆಸಾಮಿ ಹೇಳಿ ದುಡ್ಡಿನ ಆಸೆ ಗೋಸ್ಕರ ನಾನು ಆತನೊಂದಿಗೆ ಅರಣ್ಯ ಪ್ರದೇಶವನ್ನು ಪ್ರವೇಶ ಮಾಡಿದೆ ಎಂದು ನಮಗೆ ಹೇಳಿದ . ಆ ಸಮಯದಲ್ಲಿ

ಗೋವಿಂದ ನು ಶ್ರೀಗಂದದ ಮರದ ಬುಡಗಳನ್ನು ತೋರಿಸಿ ತಾವು ತಂದಿದ್ದ ಹಾರೆಯಿಂದ ಬೇರು ಸಮೇತ ಕಿತ್ತು ಅವುಗಳನ್ನು ಚಕ್ಕೆಯಾಗಿ ಪರಿವರ್ತಿಸಿ ಪಂಚೆ ಬಟ್ಟೆಯಲ್ಲಿ ಸುತ್ತಿ ತೆಗೆದುಕೊಂಡಲು ಹೋಗಲು ಪ್ರಯತ್ನಿಸಿದ ಸಮಯದಲ್ಲಿ ತಾವುಗಳು ನಮ್ಮನ್ನು ದಸ್ತಗಿರಿ ಮಾಡಿರುವುದು ಎಂದು ತಿಳಿಸಿದ .

6. ಎಲ್ಲಾ ಸ್ವತ್ತುಗಳನ್ನು ಸರ್ಕಾರದ ಪರವಾಗಿ ಅಮಾನತ್ತು ಪಡಿಸಿಕೊಂಡು ಸ್ಥಳದಲ್ಲಿ ಮಹಜರು ಪಂಚನಾಮೆಯನ್ನು ಸಂಜೆ 4.30-6.00 ಗಂಟೆಯವರೆಗೆ ನಡೆಸಿರುತ್ತೇವೆ . ಸಾಕ್ಷಿ ಗುರುತಿಸಿದ ಮಹಜರು ದಾಖಲೆಯನ್ನು ನಿಪಿ 1 ಎಂದು ಅದರಲ್ಲಿದ್ದ ಸಾಕ್ಷಿ ಸಹಿಯನ್ನು ನಿಪಿ 1ಎ ಎಂದು ಗುರುತಿಸಲಾಯಿತು.

7. ನ್ಯಾಯಾಲಯದ ಮುಂದಿದ್ದ ಶ್ರೀಗಂದದ ಚಕ್ಕೆಗಳನ್ನು ಕಟ್ಟಿ ಇಟ್ಟಿದ ನೀಲಿ ಬಣ್ಣದ ಚೆಕ್ಸ್ ಲುಂಗಿಯ ಗಂಟನ್ನು ಬಿಡಿಸಿ ಅದರ ಒಳಗೆ ಇದ್ದ ಚಕ್ಕೆಯ ತುಂಡುಗಳನ್ನು ಸಾಕ್ಷಿಯು ತಾವು ಅಮಾನತ್ತುಪಡಿಸಿದ ಶ್ರೀಗಂದದ ಚಕ್ಕೆಯ

ತುಂಡುಗಳು ಎಂದು ಗುರುತಿಸಿದ್ದು , ಈ ಸಂದರ್ಭದಲ್ಲಿ ಆರೋಪಿ ಪರ ವಕೀಲರು ಸದರಿ ಪಂಚೆಯ ಗಂಟಿಗೆ ಸೀಲು ಮಾಡಿಲ್ಲ ಎನ್ನುತ್ತಾರೆ . ಸಾಕ್ಷಿ ಗುರುತಿಸಿದ ಚಕ್ಕೆಯ ತುಂಡುಗಳನ್ನು ಲೆಕ್ಕ ಹಾಕಿದಾಗ 29 ಚಕ್ಕೆಗಳು ಇದ್ದು ಅವುಗಳನ್ನು ಒಟ್ಟಾಗಿ ಮುದ್ದೆ ಮಾಲು 1 ಎಂದು ಗುರುತಿಸಲಾಯಿತು.

8. ನ್ಯಾಯಾಲಯದ ಮುಂದಿದ್ದ ಎರಡು ಮರದ ಬುಡದ ತೊಗಟೆ ಸಹಿತ ಶ್ರೀಗಂದದ ಮರದ ತುಂಡುಗಳು ಎಂದು ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 2 ಎಂದು ಗುರುತಿಸಲಾಯಿತು.

9. ಕಬ್ಬಿಣದ ಹಾರೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮುದ್ದೆ ಮಾಲು 3 ಎಂದು ಗುರುತಿಸಲಾಯಿತು.

10. ಕಬ್ಬಿಣದ ಕತ್ತಿಯನ್ನು ಸಾಕ್ಷಿ ನೋಡಿ ಗುರುತಿಸಿದುದ ಅದನ್ನು ಮುದ್ದೆ ಮಾಲು 4 ಎಂದು ಗುರುತಿಸಲಾಯಿತು. ಮಹಜರನ್ನು ನನ್ನ ಉಕ್ತಲೇಖನದಂತೆ ಚಾಸಾ3 ರವರು

ಬರೆದುಕೊಂಡಿರುತ್ತಾರೆ. ಸದರಿ ಮಹಜರಿಗೆ ನಮ್ಮ ಸಿಬ್ಬಂದಿಗಳಾದ ನಾಗರಾಜು ಬಿ ಎಂ , ಬಸವರಾಜು ರವರು ಹಾಗೂ ದಿನಗೂಲಿ ನೌಕರರಾದ ಲೋಕೇಶ ಮತ್ತು ರಾಜೇಂದ್ರ ರವರ ಸಹಿಯನ್ನು ಪಡೆದುಕೊಂಡಿರುತ್ತೇನೆ .

11. ನ್ಯಾಯಾಲಯಕ್ಕೆ ಮುಂದೆ ನಾವು ವಶಕ್ಕೆ ಪಡೆದುಕೊಂಡ ಆಸಾಮಿ ವೆಂಕಟೇಶ ಎನ್ನುವ ವ್ಯಕ್ತಿ ಇದ್ದಾರೆ . ಸೆರೆಸಿಕ್ಕ ವೆಂಕಟೇಶನನ್ನು ಹಾಗೂ ವಸ್ತುಗಳನ್ನು ಘಟನಾಸ್ಥಳದಿಂದ ಠಾಣೆಗೆ ಕರೆದುಕೊಂಡು ಬಂದು ಆರೋಪಿಯ ಹೇಳಿಕೆ ಪಡೆದುಕೊಂಡು ವೈದ್ಯಕೀಯ ತಪಾಸಣೆ ನಡೆಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಶಪಡಿಸಿಕೊಂಡ ವಸ್ತುಗಳನ್ನು ಅಮಾನತ್ತು ಪಡಿಸಿ ಸುರಕ್ಷತೆಗೆ ನಮ್ಮ ಕಚೇರಿಯಲ್ಲಿ ಇರಿಸಿರುತ್ತೇನೆ .

12. ನಂತರ ಎಫ್ ಓ ಸಿ ರಿಜಿಸ್ಟರು ಮಾಡಿಸಿ ಅನುಮತಿಗಾಗಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿ ಗುರುತಿಸಿದ ದಾಖಲೆಯನ್ನು ನಿಪಿ 2 ಎಂದು ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು.

13. ಆನಂತರ ಪ್ರ.ವ.ವರದಿಯೊಂದಿಗೆ ಮಹಜರು , ಅಮಾನತ್ತು ಪಂಚನಾಮೆ ಮತ್ತು ಸ್ವತ್ತಿನ ಪಟಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ .

14. ನಂತರ ವಶಪಡಿಸಿಕೊಂಡ 1 ನೇ ಆರೋಪಿಯನ್ನು ಸೂಕ್ತ ಬೆಂಗಾವಲಿನೊಂದಿಗೆ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ .

15. 1 ನೇ ಆರೋಪಿ ಯು ತಲೆಮರೆಸಿಕೊಂಡ ಆರೋಪಿ ಗೋವಿಂದನ ಬಗ್ಗೆ ನೀಡಿದ ಮಾಹಿತಿಯ ಆದಾರದಲ್ಲಿ ದಿಃ 12.6.2025 ರಂದು ಕರಿಗಟ್ಟದಲ್ಲಿರುವ ಆತನ ಮನೆಗೆ ಹೋಗಿ ಪರಿಶೀಲನೆ ಮಾಡಿ ಆತನ ಆದಾರಕಾರ್ಡು ಬಗ್ಗೆ ಮನೆಯಲ್ಲಿದ್ದವರನ್ನು ಕೇಳಿರುತ್ತೇನೆ . ಅವರು ಆದಾರ ಕಾರ್ಡಿನ ಪ್ರತಿ ಕೊಟ್ಟು ಆತ ಮನೆಯಲ್ಲಿ ಇಲ್ಲ ಎಂದು ಹೇಳಿರುತ್ತಾರೆ . ಆತನನ್ನು ಹುಡುಕಲು ಉಪ ವಲಯಣ್ಯಾದಿಕಾರಿ ಮತ್ತು ಗಸ್ತು ಅರಣ್ಯಪಾಲಕರನ್ನು ನಿಯೋಜನೆ ಮಾಡಿರುತ್ತೇನೆ .ಅವರು ಹೋಗಿ ಹುಡುಕಿದಾಗ

ಆತನ ಬಗ್ಗೆ ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲ. ಆ ತಕ್ಷಣ ನನಗೆ ವರ್ಗಾವಣೆಯಾಗಿದ್ದು ಕಡತವನ್ನು ಮುಂದಿನ ತನಿಖೆಯ ಸಂಬಂದ ಚಾಸಾ8 ರವರಿಗೆ ಹಸ್ತಾಂತರಿಸಿರುತ್ತೇನೆ . 2 ನೇ ಆರೋಪಿ ಗೋವಿಂದನು ನಾವು ಘಟನ ಸ್ಥಳಕ್ಕೆ ಹೋದ ದಿನ ಆತ ಓಡಿಹೋಗುವಾಗ ನೋಡಿದ್ದು ನಾನು ಆತನನ್ನು ಗುರುತಿಸುತ್ತೇನೆ . ಅವನು ಇಂದು ನ್ಯಾಯಾಲಯದ ಮುಂದೆ ಇದ್ದಾನೆ .

<u>ಪಾಟೀ ಸವಾಲುಃ 1 ನೇ ಆರೋಪಿ ಪರವಾಗಿ ಃ</u>
<u>ಶ್ರೀಮತಿ ಹೆಚ್ ಎನ್ ಜಿ ವಕೀಲರಿಂದಃ</u>

16. ನನಗೆ ಫೋನ್ ಕರೆ ಬಂದಾಗ ಸುಮಾರು 2.00- 2.30 ಗಂಟೆಯಾಗಿತ್ತು . ನಾನು ಆ ಸಂದರ್ಭದಲ್ಲಿ ವಲಯ ರೇಂಜರ್ ಆಪಿಸ್ ನಲ್ಲಿ ಇದ್ದೆ. ನಮ್ಮ ಕಚೇರಿಗೂ ಕೃತ್ಯ ನಡೆದ ಸ್ಥಳಕ್ಕೂ 5 ರಿಂದ 6 ಕಿ ಮೀ ದೂರ ಇರುತ್ತದೆ . ನನ್ನೊಂದಿಗೆ ಒಟ್ಟು 7 ಜನ ಸಿಬಬಂದಿಗಳು ಬಂದಿದ್ದರು.

17. ನಾವು ತಂಡ ರಚಿಸಿದ ಸ್ಥಳಕ್ಕೂ ಆರೋಪಿ ಇದ್ದ ಸ್ಥಳಕೂ ಸುಮಾರು 200 ರಿಂದ 300 ಮೀಟರ್ ದೂರ ಇದೆ . ಕರಿಗಟ್ಟದ ಅರಣ್ಯದ ಏತನೀರಾವರಿಪ್ರದೇಶ ಸುಮಾರು 1000 ಎಕರೆ

ವಿಸ್ತಿರ್ಣ ಇದೆ . ಅದರ ಸುತ್ತ ತಂತಿ ಬೇಲಿ ಇದೆಯೇ ಎಂದರೆ ಕೆಲವೊಂದು ಕಡೆ ಇಲ್ಲ. ನನಗೆ ಕರೆ ಮಾಡಿದ ಸಿಬ್ಬಂದಿಗಳ ಹೆಸರು ಶ್ರವಣಕುಮಾರ ಮತ್ತು ನಾಗರಾಜು .

18.ಆರೋಪಿಗಳ ಚಲನವಲನ ವನ್ನು ನಾವು ಮೊಬೈಲ್ ವಿಡಿಯೋದಲ್ಲಿ ರೆಕಾರ್ಡು ಮಾಡಿಲ್ಲ. ಆ ರೀತಿ ಮಾಡಲು ನಿಮಗೇನು ತೊಂದರೆ ಇರಲಿಲ್ಲ ಎಂದರೆ ನಾವು ಅವರಿಂದ ದೂರದಲ್ಲಿ ಇದ್ದೆವು.

19. ನಮ್ಮನ್ನು ನೋಡಿ ಆರೋಪಿತರು ತಪ್ಪಿಸಿಕೊಂಡು ಓಡಿದರು ಎಂದು ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಗಳು ದರಿಸಿದ್ದ ಬಟ್ಟೆಯ ಬಗ್ಗೆ ಯಾವುದೆ ಉಲ್ಲೇಖ ಮಾಡಿಲ್ಲ ಎಂದರೆ ಮಹಜರಿನಲ್ಲಿ ಮಾಡಿದ್ದೇವೆ . ನಾವು 29 ಗಂದದ ಚಕ್ಕೆಗಳನ್ನು ಮತ್ತು 2 ಬುಡಗಳನ್ನು ವಶಪಡಿಸಿಕೊಂಡಿರುವುದು ಸುಳ್ಳು ಎಂದರೆ ಸರಿಯಲ್ಲ.

20.ಆರೋಪಿಯನ್ನು ದಸ್ತಗಿರಿ ಮಾಡಿದ ಸ್ಥಳದಲ್ಲಿ ಮಹಜರು ಮಾಡಿದ್ದೀರಾ ಎಂದರೆ ಆತನನ್ನು ಕೃತ್ಯ ನಡೆದ ಸ್ಥಳದಲ್ಲೇ

ವಶಪಡಿಸಿಕೊಂಡಿದ್ದು ಅಲ್ಲಿ ಮಹಜರು ಮಾಡಿರುತ್ತೇವೆ .

21. ಆರೋಪಿಯನ್ನು ದಸ್ತಗಿರಿ ಮಾಡಿದ ಸಂದರ್ಭದಲ್ಲಿ ಫೊಟೋ ತೆಗೆದಿಲ್ಲ. ಕರಿಗಟ್ಟ ಅರಣ್ಯ ಪ್ರದೇಶ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇದ್ದು ಅಲ್ಲಿ ವಾಹನಗಳ ಓಡಾಟ ಇದೆ ಎಂದರೆ ಹೌದು. ಅದೇ ರೀತಿ  ಸಾರ್ವಜನಿಕರು ಓಡಾಡುತ್ತಾರೆ ಎಂದರೆ ಹೌದು . ರಸ್ತೆಯಲ್ಲಿ ಓಡಾಡುತ್ತಾರೆ . ಮಹಜರಿಗೆ ಸಾರ್ವಜನಿಕ ವ್ಯಕ್ತಿಗಳ ಸಹಿ ಪಡೆಯಲು ತೊಂದರೆ ಇತ್ತಾ ಎಂದರೆ ಅದು ಕಾಡಿನ ಮದ್ಯದಲ್ಲಿ ಮಾಡಿದುದರಿಂದ ಯಾರು ಇರಲಿಲ್ಲ.

22. ನಾವು ಅರಣ್ಯಪ್ರದೇಶದಲ್ಲಿ ಘಟನೆ ನಡೆದಿದೆ ಎನ್ನಲಾದ ಸ್ಥಳಕ್ಕೆ ಹೋಗಿಲ್ಲದೇ ಇದ್ದರೂ ಸಹ ನಮ್ಮ ಕಚೇರಿಯ ಕೇಸುಗಳ ಅಂಕಿಅಂಶಗಳ ಉದ್ದೇಶಕ್ಕಾಗಿ ಆರೋಪಿ 1 ಮತ್ತು 2 ರವರ ವಿರುದ್ದ  ಸುಳ್ಳು ಕೇಸನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

23.ಮುದ್ದೆ ಮಾಲು  1 ರಿಂದ  4 ನ್ನು ನಿಯಮಾನುಸಾರ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅವುಗಳ ತೂಕದ

ಅಳತೆಯನ್ನು ಸರಿಯಾಗಿ ಮಾಡಿ ನಮೂದಿಸಿಲ್ಲ ಹಾಗೂ ತೂಗುವ ಸಂದರ್ಭದಲ್ಲಿ ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಮರದ ಬುಡಗಳನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ.

24. ಮುದ್ದೆ ಮಾಲು 1 ರಿಂದ 4 ನ್ನು ಸೃಷ್ಟಿಸಿ ಆರೋಪಿಗಳ ವಿರುದ್ದ ಸುಳ್ಳು ಕೇಸನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಚೇರಿಯಲ್ಲೇ ಇದ್ದ ಮುದ್ದೆ ಮಾಲು 3 , 4 ಈ ಪ್ರಕರಣದಲ್ಲಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ.

25. ಕೂಲಿ ಕಾರ್ಮಿಕರ ವಿರುದ್ದ ಸುಳ್ಳು ಮಹಜರು ನೆಡಸಿ ಸುಳ್ಳು ಕೇಸನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

26. ಎಪ್ ಐ ಆರ್ ನಲ್ಲಿ ಸಮಯ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಸಮಯ ನಮೂದು ಮಾಡಲು ತೊಂದರೆ ಇರಲಿಲ್ಲ ಎಂದರೆ ಅದರಲ್ಲಿ ಸಮಯ ನಮೂದು ಮಾಡಬೇಕು ಎಂದು ಇಲ್ಲ.

27. ನಾನು ಮಹಜರನ್ನು ಸ್ಥಳಕ್ಕೆ ಹೋಗದೇ ಠಾಣೆಯಲ್ಲಿ ಬರೆದಿರುವುದರಿಂದ ಠಾಣಾ ಸಿಬ್ಬಂದಿಗಳದ್ದೇ ಸಹಿ ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ.

28. ಎಷ್ಟು ವಯಸ್ಸಿನ ಬುಡ ಎಂದು ನಮೂದು ಮಾಡಿಲ್ಲ ಎಂದರೆ ಹೌದು .

29. ಆರೋಪಿಗಳು ಯಾವತ್ತು ಕೂಡ ಘಟನಾ ಸ್ಥಳಕ್ಕೆ ಹೋಗಿದಿದ್ದರೂ ಸಹ ಠಾಣೆಯ ಅಂಕಿ ಅಂಶಕ್ಕೋಸ್ಕರ ಅವರ ವಿರುದ್ಧ ಸುಳ್ಳು ಕೇಸು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ನೇ ಆರೋಪಿ ಪರವಾಗಿ ಃ</u>**

**<u>ಶ್ರೀ ಎಸ್ ಎಸ್ ಎ ವಕೀಲರಿಂದಃ</u>**

30. ನಮ್ಮ ಕಚೇರಿಯಿಂದ ಘಟನ ಸ್ಥಳಕ್ಕೆ ಹೋಗುವ ಮದ್ಯದಲ್ಲಿ ಯಾವ ಯಾವ ಊರುಗಳು ಬರುತ್ತವೆ ಎಂದರೆ ಬಾಬುರಾಯನಕೊಪ್ಪಲು ಮತ್ತು ಕರಿಗಟ್ಟ ಸಿಗುತ್ತದೆ. ಆ ಮದ್ಯದಲ್ಲಿ ಶ್ರೀನಿವಾಸ ಅಗ್ರಹಾರ ಬರುತ್ತದೆ ಎಂದರೆ ಸಾಕ್ಷಿಯು ನಾವು ಹೋಗಿರುವುದು ಬೇರೆ ರಸ್ತೆಯ ಮೂಲಕ ಎನ್ನುತ್ತಾರೆ . ನಾವು ದಾಟಿ ಹೋದ ಎರಡೂ ಗ್ರಾಮಗಳಲ್ಲಿ

ಸಾರ್ವಜನಿಕರು ಸಾಮಾನ್ಯವಾಗಿ ಇರುತ್ತಾರೆ ಎಂದರೆ ಹೌದು . ನಾವು ಹಾದುಹೋದ ರಸ್ತೆಯಲ್ಲಿ ಸಾರ್ವಜನಿಕ ವಾಹನಗಳ ಓಡಾಟ ಕೂಡ ಇದೆ ಎಂದರೆ ಹೌದು .

31.ನಮಗೆ ನಮ್ಮ ಸಿಬ್ಬಂದಿಗಳನ್ನು ಹೊರತುಪಡಿಸಿ ಸದರಿ ಊರುಗಳ ಯಾರಾದರೂ ಸಾರ್ವಜನಿಕರನ್ನು ಕರೆದುಕೊಂಡು ಹೋಗಲು ತೊಂದರೆ ಇತ್ತಾ ಎಂದರೆ ಇಲ್ಲ.

32. ನಮ್ಮ ಠಾಣೆಯಲ್ಲಿ ಸಿಬ್ಬಂದಿಗಳ ದಿನನಿತ್ಯದ ಕರ್ತವ್ಯದ ಬಗ್ಗೆ ಠಾಣಾ ದಿನ ಚರಿ ಇರುತ್ತದೆ ಎಂದರೆ ಇಲ್ಲ. ಸದರಿ ದಿನ ಸಿಬ್ಬಂದಿಗಳು ನಮ್ಮ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದರು ಎನ್ನುವ ಬಗ್ಗೆ ದಾಖಲೆಗಳನ್ನು ಕೊಟ್ಟಿಲ್ಲ.

33. ನಮಗೆ ಇಬ್ಬರು ಆರೋಪಿಗಳು ಕೆತ್ತನೆ ಮಾಡುತ್ತಿದ್ದಾರೆ ಎಂಬ ಮಾಹಿತಿ ಸಿಕ್ಕಿದಾಗ ಅವರ ತಲಾಶು ಮಾಡಲು ಮೇಲಾದಿಕಾರಿಗಳಿಂದ ಅಥವಾ ನ್ಯಾಯಾಲಯದಿಂದ ಅನುಮತಿ ಪಡೆದಿದ್ದೀರಾ ಎಂದರೆ ಅದರ ಅನುಮತಿ ಇಲ್ಲ.

34. ಓಡಿ ಹೋದ ಆರೋಪಿಯ ಚಹರೆ ಮತ್ತು ಬಟ್ಟೆಯ

ಬಗ್ಗೆ ಎಲ್ಲೂ ನಮೂದು ಮಾಡಿಲ್ಲ . ಆರೋಪಿಯನ್ನು ಘಟನ ಸ್ಥಳದಿಂದ ಎಷ್ಟು ದೂರದಲ್ಲಿ ಹಿಡಿದೆವು ಎಂಬ ಬಗ್ಗೆ ನಮೂದು ಮಾಡಿದ್ದೀರಾ ಎಂದರೆ ಮಹಜರಿನಲ್ಲಿ ಆ ಬಗ್ಗೆ ಹೇಳಿದ್ದೇವೆ ಆದರೆ ಎಷ್ಟು ದೂರ ಎಂದು ಬರೆದಿಲ್ಲ ಆ ರೀತಿ ನಮೂದು ಮಾಡಲು ಏನು ತೊಂದರೆ ಇರಲಿಲ್ಲ ಎಂದರೆ ಹೌದು.

35. ಅರೋಪಿಯನ್ನು ದಸ್ತಗಿರಿ ಮಾಡಬೇಕಾದರೆ ಅಂಗಶೋದನೆ ಮಾಡುವ ಬಗ್ಗೆ ಹಿರಿಯ ಅದಿಕಾರಿಗಳಿಂದ ಅನುಮತಿ ಪಡೆದಿದ್ದಿರಾ ಎಂದರೆ ಇಲ್ಲ. ನಾವು ಆರೋಪಿಗಳನ್ನು ಸ್ಥಳದಲ್ಲಿ ಹಿಡಿದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳನ್ನು ಹಿಡಿದಿದ್ದೇನೆ ಎಂದು ಹೇಳಿದ ಸ್ಥಳದಲ್ಲಿ ಮಹಜರನ್ನು ಮಾಡಿದ್ದೀರಾ ಎಂದರೆ ಹೌದು . ಸದರಿ ಮಹಜರನ್ನು ಪ್ರತ್ಯೇಕವಾಗಿ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ.

36. ಗಂದದ ಮರಗಳು ಇದ್ದ ಸ್ಥಳದಲ್ಲಿ ಜಿ ಪಿ ಎಸ್ ನ್ನು ಅಳವಡಿಸಿದ್ದೀರಾ ಎಂದರೆ ಅರಣ್ಯ ಪ್ರದೇಶದಲ್ಲಿ ಆ ರೀತಿ ಜಿ

ಪಿ ಎಸ್ ಅಳವಡಿಸುವುದಿಲ್ಲ. ವಸ್ತುಗಳನ್ನು ವಶಪಡಿಸಿಕೊಂಡ ಸ್ಥಳ ಮತ್ತು 1 ನೇ ಆರೋಪಿಯನ್ನು ದಸ್ತಗಿರಿ ಮಾಡಿದ ಸ್ಥಳ ಬೇರೆ ಬೇರೆ ಎಂದರೆ 200 ರಿಂದ 300 ಮೀಟರು ಅಂತರ ಇದೆ ಎನ್ನುತ್ತಾರೆ. 200 ರಿಂದ 300 ಮೀಟರ್ ಅಂತರ ಇರುವಲ್ಲೂ ಕೂಡ ಮಹಜರನ್ನು ಮಾಡಬೇಕು ನೀವು ಮಾಡಿಲ್ಲ ಎಂದರೆ ಸದರಿ ಮಹಜರು ಮುಂದುವರೆದ ಮಹಜರು(ರನ್ನಿಂಗ್ ಮಹಜರು) ಎನ್ನುತ್ತಾರೆ . ಮಹಜರಿನಲ್ಲಿ ನಿಖರವಾಗಿ 200 ರಿಂದ 300 ಮೀಟರ್ ಎಂದು ಬರೆದಿಲ್ಲ ಎಂದರೆ ಸ್ವಲ್ಪ ದೂರ ಎಂದು ಬರೆದಿದ್ದೇವೆ .

37. 200-300 ಮೀಟರ್ ದೂರ ಎಂದು ಬರೆಯಲು ತೊಂದರೆ ಇರಲಿಲ್ಲ ಎಂದರೆ ಹೌದು .

38. ಅಮಾನತ್ತುಪಡಿಸಿಕೊಂಡಿದ್ದೇವೆ ಎಂದು ಹೇಳಲಾದ ವಸ್ತುಗಳನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಸಾರ್ವಜನಿಕರಿಗೆ ನೋಟಸನ್ನು ನೀಡಿ ಪಂಚರನ್ನಾಗಿ ಕರೆಯಲು ತೊಂದರೆ ಇತ್ತಾ ಎಂದರೆ ಅರಣ್ಯ ಪ್ರದೇಶವಾಗಿರುವುದರಿಂದ ಮಾಡಿಲ್ಲ ಎನ್ನುತ್ತಾರೆ .

39. ಎರಡು ಶ್ರೀಗಂದದ ಮರದ ಬುಡಗಳನ್ನು ವಶಪಡಿಸಿಕೊಳ್ಳುವಾಗ ಮರದ ಬುಡಗಳು ಎಲ್ಲಿ ಸಿಕ್ಕಿತು ಎನ್ನುವ ಬಗ್ಗೆ ಮಹಜರು ಮಾಡಿದ್ದೀರಾ ಎಂದರೆ ಬುಡವನ್ನು ಪ್ರತ್ಯೇಕವಾಗಿ ತೆಗೆದುದರಿಂದ ಬುಡ ಮಹಜರು ಮಾಡಿಲ್ಲ ಎನ್ನುತ್ತಾರೆ .

40. ಯಾವ ಪ್ರದೇಶದಿಂದ ಆ ಮರವನ್ನು ಕಿತ್ತರು ಹಾಗೂ ಕಿತ್ತ ಜಾಗದ ಅಳತೆ ವಿಸ್ತೀರ್ಣದಲ್ಲಿ ಮಹಜರು ಮಾಡಿದ್ದೀರಾ ಎಂದರೆ ಇಲ್ಲ. ಆ ರೀತಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಹೌದು .

41. ಮರಗಳ ರೂಪುರೇಶೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಮರದಲ್ಲಿ ಎಷ್ಟು ಕೊಂಬೆಗಳು ಇವೆ , ಎಷ್ಟು ಉದ್ದ , ಗಾತ್ರ ಇದೆ ಎಂದು ಮಹಜರು ಮಾಡಿದ್ದೀರಾ ಎಂದರೆ ಕೊಂಬೆ ಗಳ ಬಗ್ಗೆ ಮಾಡಿಲ್ಲ, ತೂಕ ಮತ್ತು ಸುತ್ತಳತೆಗಳನ್ನು ಮಾಡಿದ್ದೇವೆ. ವಸ್ತುಗಳನ್ನು ವಶಪಡಿಸಿಕೊಳ್ಳಬೇಕಾದರೆ ಅವುಗಳನ್ನು ಪ್ಯಾಕು ಮಾಡಿ ಸೀಲ್ ಮಾಡಬೇಕು , ಆ ಕ್ರಮ ಜರುಗಿಸಿಲ್ಲ ಎಂದರೆ ಹೌದು

ಸೀಲ್ ಮಾಡಿಲ್ಲ.

42. ಈ ಪ್ರಕರಣದಲ್ಲಿಯೇ ಮುದ್ದೆಮಾಲುಗಳು ಸಿಕ್ಕಿದವು ಎಂಬ ಬಗ್ಗೆ ಬರವಣಿಗೆ ಮಾಡಿದ್ದೀರಾ ಎಂದರೆ ಇಲ್ಲ.

43. ಮುದ್ದೆ ಮಾಲು 3 , 4 ನ್ನು ಮಹಜರು ಕ್ರಮ ಜರುಗಿಸದೇ ವಶಪಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಮುದ್ದೆಮಾಲು 3 , 4 ಸಾಮಾನ್ಯವಾಗಿ ಹಳ್ಳಿಯ ಜನಗಳ ಬಳಿ ಸಿಗುತ್ತವೆ ಎಂದರೆ ಹೌದು. ಹಾಗೆಯೇ ನಮ್ಮ ಇಲಾಖೆಯಲ್ಲೂ ಸದರಿ ವಸ್ತುಗಳನ್ನು ಇಟ್ಟುಕೊಂಡಿರುತ್ತೇವೆ ಎಂದರೆ ಹೌದು .

44. ಮುದ್ದೆ ಮಾಲು 1, 2 ಅರಣ್ಯ ಪ್ರದೇಶದಲ್ಲಿ ಎಲ್ಲೆಂದರಲ್ಲಿ ಸಿಗುತ್ತವೆ ಎಂದರೆ ಇಲ್ಲ. 2 ನೇ ಆರೋಪಿಗೆ ಒಂದು ಕಣ್ಣು ಕಾಣಿಸುವುದಿಲ್ಲ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಆತನಿಗೆ 50 ರಿಂದ 100 ಮೀಟರ್ ಕೂಡ ಓಡಲು ಸಾದ್ಯವಿಲ್ಲ ಎನ್ನುವ ವಿಚಾರ ತಿಳಿದಿದೆಯೇ ಎಂದರೆ ಇಲ್ಲ ಆತ ನನ್ನ ಕಣ್ಮುಂದೆಯೇ ಓಡಿಹೋಗಿದ್ದಾನೆ . ಆತ ನನ್ನ ಮುಂದೆಯೇ ಓಡಿ ಹೋಗಿದ್ದರೆ ಆತನ ಚಹರೆಯ ಬಗ್ಗೆ ನನಗೆ ಸರಿಯಾಗಿ ಗೊತ್ತಿರುತ್ತದೆ ಎಂದರೆ ಹೌದು . ಆತನ ಚಹರೆಯ ಬಗ್ಗೆ ದಾಖಲೆ ನಮೂದು

ಮಾಡಿಲ್ಲ ಎಂದರೆ ಹೌದು .

45. 2 ನೇಆರೋಪಿಯ ಮನೆಗೆ ಹೋಗಿ ತನಿಖೆ ನಡೆಸಿ ಆತನ ಆದಾರಕಾರ್ಡು ವಶಪಡಿಸಿಕೊಂಡ ಬಗ್ಗೆ ಹೇಳಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಮುಂದಿನ ತನಿಖಾದಿಕಾರಿಗಳು ಹಾಜರುಪಡಿಸಿದ್ದಾರೆ. ಆದಾರ ಕಾರ್ಡನ್ನು 2 ನೇ ಆರೋಪಿಯ ಪತ್ನಿಯಿಂದ ಪಡೆದಿದ್ದು ಆಕೆಯ ಹೆಸರು ಗೊತ್ತಿಲ್ಲ. ಯಾವುದೇ ರಿತಿಯ ಆದಾರ ಕಾರ್ಡನ್ನು ಅಲ್ಲಿಂದ ನಾನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

46. 2 ನೆ ಆರೋಪಿಯು ಕೆ ಶೆಟ್ಟಿಹಳ್ಳಿ ಹೋಬಳಿ , ಕಳ್ಳಿ ಕೊಪ್ಪಲು ಗ್ರಾಮದವನು ಹಾಗೂ ನಾನು ಹೇಳಿದಂತೆ ಕರಿಗಟ್ಟದ ಕೆಳಗಿನ ಊರಿನವನು ಅಲ್ಲಎಂದರೆ ಸರಿಯಲ್ಲ. ನಾನು ಇದೇ ಮೊದಲ ಬಾರಿ 2 ನೇ ಆರೋಪಿಯನ್ನು ನ್ಯಾಯಾಲಯದಲ್ಲಿ ನೋಡುತ್ತಿರುವುದು ಎಂದರೆ ಸರಿಯಲ್ಲ.

47.ನಾನು ಸಿಬ್ಬಂದಿಗಳೊಂದಿಗೆ ಸೇರಿಕೊಂಡು ಆರೋಪಿಗಳ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಯಾವ ವಾಹನದಲ್ಲಿ ಹೋದೆವು ಎಂದು ಎಲ್ಲೂ ನಮೂದು ಮಾಡಿಲ್ಲ ಎಂದರೆ ಹೌದು .

48. ಮಹಜರಿನಲ್ಲಿ ಎಲ್ಲಿಯೂ ಕೂಡ ನನ್ನ ಉಕ್ತಲೇಖನದಂತೆ ಬರೆಯಲಾಗಿದೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ಮಹಜರಿನಲ್ಲಿ ಉಕ್ತಲೇಖನ ಎಂದು ಬರೆದಿಲ್ಲ ಇದೇ ಮೊದಲ ಬಾರಿ ಉಕ್ತಲೇಖನದಂತೆ ಬರೆಯಲಾಗಿದೆ ಎಂದು ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಹೌದು .

49. ವಸ್ತುಗಳನ್ನು ವಶಪಡಿಸಿಕೊಂಡಿದ್ದೇವೆ ಎಂದು ಹೇಳಲಾದ ಸಮಯದಲ್ಲಿ ವಸ್ತುಗಳನ್ನು ವಶಪಡಿಸಿಕೊಂಡ ಸ್ಥಳದಲ್ಲಿ ಮಹಜರಿಗೆ ಸಹಿ ಮಾಡಿದ್ದಾರ ಎನ್ನಲಾದ ಠಾಣಾ ಸಿಬ್ಬಂದಿಗಳೊಂದಿಗೆ ಪೊಟೋ ತೆಗೆಸಿ ಹಾಜರುಪಡಿಸಿಲ್ಲ ಎಂದರೆ ಹೌದು . ನಮ್ಮ ಎಲ್ಲಾ ಸಿಬ್ಬಂದಿಗಳಲ್ಲೂ ಎಂಡ್ರಾಯ್ಡ್ ಫೋನ್ ಗಳು ಇವೆ ಎಂದರೆ ಹೌದು. ಸದರಿ ಫೋನ್ ಗಳಲ್ಲಿ ಘಟನ ಸ್ಥಳದ ಮಹಜರು ಪೊಟೋ ವನ್ನು

ತೆಗೆದು ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂದರೆ ಇರಲಿಲ್ಲ.

50. ಯಾವುದೇ ವ್ಯಕ್ತಿ ಓಡಿಹೋಗಬೇಕಾದರೆ ಆತನ ಬೆನ್ನು ಕಾಣಿಸುತ್ತದೆ , ಮುಖ ಕಾಣಿಸುವುದಿಲ್ಲ ಎಂದರೆ ಹೌದು . ಮುದ್ದೆ ಮಾಲು 1 ರಿಂದ 4 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಸೃಷ್ಟಿ ಮಾಡಿಕೊಂಡ ಪ್ರಕರಣದಲ್ಲಿ ಆರೋಪಿಗಳನ್ನು 1 ಮತ್ತು 2 ನೇ ಆರೋಪಿಗಳನ್ನಾಗಿ ತೋರಿಸಿ ಅವರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

51. ಮಹಜರು ಕ್ರಮವನ್ನು ಠಾಣೆಯಲ್ಲಿ ಸೃಷ್ಟಿ ಮಾಡಿ ಬರೆದಿರುವುದು ಎಂದರೆ ಸರಿಯಲ್ಲ.

52. ನಾವು ನಿಜವಾಗಿಯೂ ಘಟನ ಸ್ಥಳಕ್ಕೆ ಹೋಗಿದ್ದರೆ , ಆರೋಪಿ ಹಿಡಿದ ಸ್ಥಳ , ಮರದ ತುಂಡುಗಳು ಸಿಕ್ಕಿದ ಸ್ಥಳ ಹಾಗೂ ಬುಡಗಳು ಸಿಕ್ಕಿದ ಸ್ಥಳಗಳನ್ನು ಪ್ರತ್ಯೇಕವಾಗಿ ಮಹಜರು ಮಾಡುತ್ತಿದ್ದೆವು , ಹೋಗದೇ ಪೊಲೀಸ್ ಠಾಣೆಯಲ್ಲಿ ಸೃಷ್ಟಿ ಮಾಡಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

53. 1 ಮತ್ತು 2 ನೇ ಆರೋಪಿಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

1 ನೇ ಆರೋಪಿ ಪರ ವಕೀಲರು 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ .

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)